ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಇದೇ ವಾರಕ್ಕೆ ಹಿಂದಿನ 5 ವರ್ಷಗಳ ಅಂದಾಜು.

ಆಹಾರ ಜಿನಸಿಗಳ ಧಾರಣೆಗಳು :—

		ಚಾಲ್ತಿ.			
ಅಕ್ಕಿ ರೂಪಾಯಿ 1ಕ್ಕೆ	... ...	8	6	ರಿಂದ 6¼	ವರಿಗೆ } ಸೇರುಗಳು.
ರಾಗಿ ,,	... ...	20	11	ರಿಂದ 12	ವರಿಗೆ }

ವ್ಯವಸಾಯದ ಕಾರ್ಯ—ರಾಗಿಯ ಕುಯ್ಯಲು.

ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳ ಸ್ಥಿತಿ :—ಹೊಸಕೋಟೆ, ಕಾರ್ಕಾರಹಳ್ಳಿ, ಕ್ಲೋಸ್‌ಪೇಟೆ, ಈ ತಾಲ್ಲೂಕುಗಳಲ್ಲಿ ಅವರೆ, ತೊಗರಿ, ಮುಂತಾದವುಗಳು ಬಳ್ಳೀ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಮಾಗಡಿಯಲ್ಲಿಯೂ ಮತ್ತು ಮಾಗಡಿ ತಾಲ್ಲೂಕಿನ ಕೆಲವು ಭಾಗಗಳಲ್ಲಿಯೂ ಸಣ್ಣ ಕೆರೇ ಕೆಳಗೆ ಇರುವ ಪ್ರಣಜೆಯೂ ಮತ್ತು ಕಬ್ಬೂ ಬಳ್ಳೀ ಸ್ಥಿತಿಯಲ್ಲಿವೆ. ನೀರು ಇಲ್ಲದೆ ರಾಗೀ ಪೈರು ಬಣಗಿಹೋಗಿದೆ.

ಬಿತ್ತನೆಯಾದ ಪೈರು—ದೊಡ್ಡಬಳ್ಳಾಪುರ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭತ್ತವನ್ನು ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರುಗಳು—ಕೆಲವು ತಾಲ್ಲೂಕುಗಳಲ್ಲಿ ರಾಗಿಯ ಕುಯ್ಯಲು ಮುಗಿದು ಇದೆ. ಇನ್ನೂ ಕೆಲವು ಕಡೆ ಇನ್ನೂ ಕುಯ್ಯುತ್ತಿದ್ದಾರೆ. ಸೋಕ್ಕಲ್ಲು ತಾಲ್ಲೂಕಿನಲ್ಲಿ ಭತ್ತವನ್ನೂ ಕುಯ್ಯುತ್ತಿದ್ದಾರೆ. ಮಾಗಡಿ ತಾಲ್ಲೂಕಿನಲ್ಲಿ ಹುರುಳಿ ಮುಂತಾದವುಗಳಿಗೆ ಮಳೆಯು ಬೇಕಾಗಿದೆ. ಪೈರುಗಳಿಗೆ ಯಾವವಿಧವಾದ ನಷ್ಟವಿಲ್ಲವೆಂದು ರಿಪೋರ್ಟಾಗಿದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಾಕಾದಷ್ಟು ಇವೆ.

11. ಕಾರ್ಕಾರಹಳ್ಳಿ, ಕ್ಲೋಸ್‌ಪೇಟೆ, ಈ ಕಸಬಾಗಳಲ್ಲಿಯೂ ಮತ್ತು ಹೊಸಕೋಟೆ, ದೊಡ್ಡಬಳ್ಳಾಪುರ, ಕಾರ್ಕಾರಹಳ್ಳಿ, ಆನೇಕಲ್, ಚೆನ್ನಪಟ್ಟಣ, ಈ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿಯೂ, ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾವೆ. ಎಲ್ಲಾ ತಾಲ್ಲೂಕುಗಳಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯಗಳು—ಕೋಲಾರ, ಬಾರಿಂಗಪೇಟೆ, ಶಿಡ್ಲಘಟ್ಟ, ಗುಡಿಬಂಡೆ, ಇವುಗಳಲ್ಲಿ ವೈಶಾಖಿ ಭತ್ತಕ್ಕಾಗಿ ಭೂಮಿಯನ್ನು ಉಳುತ್ತಿದ್ದಾರೆ.

ಬಿತ್ತನೆಯಾದ ಪೈರು—ಕೋಲಾರ, ಬಾರಿಂಗಪೇಟೆ, ಇವುಗಳಲ್ಲಿ ಭತ್ತ.

ಕುಯ್ಯಲಾದ ಪೈರುಗಳು—ಕೋಲಾರ, ಬಾರಿಂಗಪೇಟೆ, ಚಿಂತಾಮಣಿ, ಮುಳಬಾಗಲು, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೋರೀಬಿದನೂರು ಇವುಗಳಲ್ಲಿ ಭತ್ತ ಮತ್ತು ರಾಗಿ. ಚಿಂತಾಮಣಿಯಲ್ಲಿ ಕಡ್ಲೇಕಾಯಿ. ಶಿಡ್ಲಘಟ್ಟದಲ್ಲಿ ಸಾಮೆ. ಮಾಲೂರ, ಶ್ರೀನಿವಾಸಪುರ, ಇವುಗಳಲ್ಲಿ ರಾಗಿ; ಮತ್ತು ಗುಡಿಬಂಡೆಯಲ್ಲಿ ಭತ್ತ.

ಉತ್ಪತ್ತಿಯ ಅಂದಾಜು :—

ಕೋಲಾರದಲ್ಲಿ	ಭತ್ತ ಮತ್ತು ರಾಗಿ ಉತ್ಪತ್ತಿ	...	6 ರಿಂದ 8 ಆಣೆ ವರಿಗೆ.
ಚಿಂತಾಮಣಿಯಲ್ಲಿ	ಡಿಟೋ	...	6 ಆಣೆ.
ಮುಳಬಾಗಲಿನಲ್ಲಿ	ಡಿಟೋ	...	8 ರಿಂದ 12 ಆಣೆ ವರಿಗೆ.
ಶಿಡ್ಲಘಟ್ಟದಲ್ಲಿ	ಡಿಟೋ	...	ಡಿಟೋ
ಚಿಕ್ಕಬಳ್ಳಾಪುರದಲ್ಲಿ	ಡಿಟೋ	...	8 ಆಣೆ.
ಗೋರೀಬಿದನೂರಿನ	ಡಿಟೋ	...	8 ಆಣೆ.
ಬಾರಿಂಗಪೇಟೆಯಲ್ಲಿ	ಡಿಟೋ	...	ಸುಮಾರು 6 ಆಣೆ.
ಶಿಡ್ಲಘಟ್ಟದಲ್ಲಿ	ಸಾಮೆ ಉತ್ಪತ್ತಿ	...	6 ರಿಂದ 8 ಆಣೆ ವರಿಗೆ.
ಮಾಲೂರಿನಲ್ಲಿ	ರಾಗಿ ಉತ್ಪತ್ತಿ	...	6 ಆಣೆ.

10. ಕಾಲದ ಆಯತಿಯ ಸಾಧಾರಣವಾಗಿ ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಕೋಲಾರದ ಚಿನ್ನದ ಫೀಲ್ಡಿನಲ್ಲಿಯೂ, ಕಸಬಾ ಕೋಲಾರದಲ್ಲಿಯೂ ಮತ್ತು ಬಾರಿಂಗಪೇಟೆ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿಯೂ ಪ್ಲೇಗ್, ಕಸಬಾ ಚಿಂತಾಮಣಿಯಲ್ಲಿಯೂ ಮತ್ತು ಅದಕ್ಕೆ ಸೇರಿದ ಗ್ರಾಮಗಳಲ್ಲಿಯೂ ಸೀತಾಳಿಸಿಡುಬೂ, ಮತ್ತು ಮುಳಬಾಗಲ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಶಿಡುಬೂ, ಇವುಗಳು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಬಾಗೇಪಲ್ಲಿ ತಾಲ್ಲೂಕು ಕಸಬಾ ಹೋಬಳಿಯ ಕೆಲವು ಭಾಗಗಳಲ್ಲಿಯೂ ಮತ್ತು ಗುಡಿಬಂಡೆ ಸರ್ಕಲ್ ತಾಲ್ಲೂಕಿನಲ್ಲಿಯೂ ದನಗಳಿಗೆ "ಸಪ್ಪೇ ರೋಗವು" ಬಂದಿರುವದು ಹೊರ್ತು, ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಮಳೆ ಇಲ್ಲದ್ದರಿಂದ ಬಣಗಿ ಹೋಗುತ್ತಿವೆ.

ಬಿತ್ತನೆಯಾದ ಪೈರುಗಳು—ಮದ್ದಗಿರಿ, ಸೀರ್ಯ, ಗುಬ್ಬಿ, ಕೊರ್ವಗೆರೆ, ತಿಪಟೂರು, ತುರುವೇಕೆರೆ ಈ ತಾಲ್ಲೂಕುಗಳಲ್ಲಿ ಕಡ್ಲೀ ಮತ್ತು ಜೋಳ. ಗುಬ್ಬಿಯಲ್ಲಿಯೂ ಮತ್ತು ತುರುವೇಕೆರೆಯಲ್ಲಿಯೂ ಧನಿಯಾ.

ಕುಯ್ಯಲಾದ ಪೈರುಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ರಾಗಿ; ಮದ್ದಗಿರಿ, ಸೀರ್ಯ, ಗುಬ್ಬಿ ಇವುಗಳಲ್ಲಿ ಭತ್ತ; ಮದ್ದಗಿರಿ, ಗುಬ್ಬಿ, ತಿಪಟೂರು, ಪಾವಗಡ, ಕೊರ್ವಗೆರೆ, ತುರುವೇಕೆರೆ ಇವುಗಳಲ್ಲಿ ಸಾವೆ ಮತ್ತು ನವಣೆ; ತಿಪಟೂರಿನಲ್ಲಿ ಸಜ್ಜೆ ಮತ್ತು ಬರಗು; ಸೀರ್ಯದಲ್ಲಿಯೂ ಮತ್ತು ಪಾವಗಡದಲ್ಲಿಯೂ ಹಾರಕ; ತುರುವೇಕೆರೆಯಲ್ಲಿ ಕಬ್ಬು; ಚಿಕ್ಕನಾಯಕನಹಳ್ಳಿಯಲ್ಲಿ ಜೋಳ; ಮದ್ದಗಿರಿಯಲ್ಲಿ ಹುರುಳಿ; ಮತ್ತು ಗುಬ್ಬಿಯಲ್ಲಿ ಕಡ್ಲೀಕಾಯಿ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ತುಮಕೂರು, ಚಿಕ್ಕನಾಯಕನಹಳ್ಳಿ ಈ ಕಸಬಾಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ಸಾಧಾರಣವಾಗಿ ಚೆನ್ನಾಗಿದೆಯೆಂದು ರಿಪೋರ್ಟಾಗಿದೆ. ಆದರೆ, ಟಿ. ನರಸೀಪುರದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಹುರುಳೀ ಪೈರಿಗೆ ಹುಳು ಹಿಡಿದು ಇದೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು—ಚಾಮರಾಜನಗರ, ಗುಂಡ್ಲುಪೇಟೆ, ನಂಜನಗೂಡು, ಮಳವಳ್ಳಿ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ರಾಗಿ; ಮೈಸೂರು, ಚಾಮರಾಜನಗರ ಇವುಗಳಲ್ಲಿ ಕೆಲವು ಭಾಗಗಳಲ್ಲಿ ತಡಗಣಿ ಮತ್ತು ಹೆಸರು; ಮತ್ತು ನಂಜನಗೂಡು ತಾಲ್ಲೂಕಿನ ಕೆಲವು ಭಾಗಗಳಲ್ಲಿ ತಡಗಣಿ, ಉದ್ದು, ಹೆಸರು, ಸಾವೆ ಮತ್ತು ಹಾರಕ; ಇವುಗಳೆಲ್ಲಾ ಕುಯ್ಯಲಾಗುತ್ತಿವೆ.

10. ಕಾಲದ ಆಯತಿಯು ಚೆನ್ನಾಗಿದೆ. ರೈತರಲ್ಲಿಯೂ ಮತ್ತು ವರ್ತಕರಲ್ಲಿಯೂ ಸಾಕಾದಷ್ಟು ಆಹಾರ ಜಿನಸು ಇವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಎಲ್ಲಾ ತಾಲ್ಲೂಕುಗಳಲ್ಲಿಯೂ ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ಆದರೆ, ಸಿಂಧುವಳ್ಳಿಯಲ್ಲಿ ದನಗಳಿಗೆ ಗೋಮಾರೀ ರೋಗವು ತಗಲಿ ಇದೆಯೆಂದು ರಿಪೋರ್ಟಾಗಿದೆ. ಅಲ್ಲಿಗೆ ಕ್ಯಾಟಲ್ ಡಿಸೀಜ್ ಇನ್‌ಸ್ಪೆಕ್ಟರನ್ನು ಕಳುಹಿಸಿ ಕೊಡುವ ಪ್ರಯುಕ್ತ ವಿಶದವಾಗಿ ರಿಪೋರ್ಟು ಮಾಡಬೇಕೆಂದು ಕೋರಿದೆ. ಎಲ್ಲಾ ಕಡೆಯಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಭತ್ತ, ಕಬ್ಬು, ಅವರೆ, ಹೊಗರಿ, ಮೆಣಸಿನಕಾಯಿ, ರಾಗಿ, ಕಾಡು ಹುಚ್ಚೆಳ್ಳು, ಮುಂತಾದವುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಮಳೇ ಇಲ್ಲದ್ದರಿಂದ ಅರಕೀಕೆರೆಯಲ್ಲಿ ರಾಗಿಯು ಕೆಟ್ಟುಹೋಗಿದೆ.

ಕುಯ್ಯಲಾದ ಪೈರುಗಳು—ಅರಕೀಕೆರೆ ತಾಲ್ಲೂಕಿನಲ್ಲಿ ಕಡಲೆಯನ್ನು ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರುಗಳು—ಅರಕೀಕೆರೆ ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಭತ್ತ; ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿಯೂ ಮತ್ತು ಅಲೂರು ಸಬ್ ತಾಲ್ಲೂಕಿನಲ್ಲಿಯೂ ಕಬ್ಬು; ಚನ್ನರಾಯಪಟ್ಟಣ, ಹೊಳೇನರಸೀಪುರ, ಅರಕೀಕೆರೆ, ಈ ತಾಲ್ಲೂಕುಗಳಲ್ಲಿ ರಾಗಿ; ಇವುಗಳೆಲ್ಲಾ ಕುಯ್ಯಲಾಗುತ್ತಿವೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಹಾಸನ, ಬೇಲೂರು, ಚನ್ನರಾಯಪಟ್ಟಣ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ಡಿಸ್ಟ್ರಿಕ್ಟಿನ ಎಲ್ಲಾ ಕಡೆಗಳಲ್ಲಿಯೂ ನೀರೂ ಹುಲ್ಲೂ, ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವೆಂದರೆ, ಹುರುಳಿ, ತೊಗರಿ, ಅವರೆ, ಕಡಲೆ, ಹರಳು, ಕಬ್ಬು, ಮೆಣಸಿನಕಾಯಿ, ಇವುಗಳು ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ಭತ್ತ ಮತ್ತು ರಾಗಿ; ಚನ್ನಗಿರಿ, ಹೊನ್ನಾಳಿ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಜೋಳ, ನವಣೆ ಮತ್ತು ಸಾವೆ; ಇವುಗಳೆಲ್ಲಾ ಕುಯ್ಯಲಾಗುತ್ತಿವೆ. ಮಲನಾಡು ತಾಲ್ಲೂಕುಗಳಲ್ಲಿ ಅಡಿಕೆಯ ಕೊಟವಾಗುತ್ತಿದೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಸಾಕಾದಷ್ಟು ಆಹಾರ ಜಿನಸು ಸಿಕ್ಕುತ್ತವೆ.

11. ಸೊರಬ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಸಿಡುಬೂ, ಮತ್ತು ಶಿವಮೊಗ್ಗ (ಕುಂಸಿ ಸಬ್ ತಾಲ್ಲೂಕು ಸೇರಿಸಿಕೆ ಡು), ಹೊನ್ನಾಳಿ, ತೀರ್ಥಹಳ್ಳಿ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಿಡುಬು, ಎವುಗಳು ಇದ್ದುಕೊಂಡು ಇರುವದು ಹೊತ್ತ ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಶಿವಮೊಗ್ಗ, ಚನ್ನಗಿರಿ, ಸೊರಬ, ನಗರ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಗೋಮಾರೀ ರೋಗವು ಇನ ಇದ್ದುಕೊಂಡಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಚಿಕ್ಕಮಗಳೂರಿನಲ್ಲಿ ಭತ್ತ, ಕಬ್ಬು, ಕಾಫಿ, ಕಡಲೆ, ಗೋಧಿ, ಮೆಂಥ್ಯೆ, ಧನಿಯಾ, ಹುರು ಅವರೆ, ಮತ್ತು ತೊಗರಿ; ಕಡೂರಿನಲ್ಲಿ ಕಡಲೆ, ಗೋಧಿ, ಕಬ್ಬು, ರಾಗಿ, ಹುರುಳಿ, ಅವರೆ ಮತ್ತು ಜೋಳ; ತರೀಕೆರೆಯಲ್ಲಿ ಭತ್ತ ರಾಗಿ, ಜೋಳ, ಅವರೆ ಮತ್ತು ತೊಗರಿ; ಕೊಪ್ಪದಲ್ಲಿ ಭತ್ತ, ಕಬ್ಬು, ಮೆಣಸು, ಕಾಫಿ, ಮತ್ತು ಅಡಿಕೆ; ಮೂಡಿಗೆರೆಯ ಭತ್ತ, ರಾಗಿ, ಅಡಿಕೆ ಮತ್ತು ಕಾಫಿ; ಎಡೇಹಳ್ಳಿಯಲ್ಲಿ ಭತ್ತ, ಕಬ್ಬು, ಮತ್ತು ಕಾಫಿ; ಶೃಂಗೇರಿಯಲ್ಲಿ ಭತ್ತ ಮತ್ತು ಅಡಿಕೆ; ಇವ ಗಳೆಲ್ಲಾ ಬಳ್ಳೀ ಸ್ಥಿತಿಯಲ್ಲಿವೆ. ಎಡೇಹಳ್ಳಿಯಲ್ಲಿ ಅಡಿಕೇ ಫಸಲಿಗೆ "ಕೊಳೀ ರೋಗವು" ಬಂದಿವೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ:

ಚಿಕ್ಕಮಗಳೂರಿನಲ್ಲಿ—ಭತ್ತ ಮತ್ತು ಕಾಫಿ, ಉತ್ಪತ್ತಿ 12 ಆಣೆ; ಮತ್ತು ರಾಗಿ, ಉತ್ಪತ್ತಿ 10 ಆಣೆ.

ಕಡೂರಿನಲ್ಲಿ—ಕಬ್ಬು ಮತ್ತು ರಾಗಿ, ಉತ್ಪತ್ತಿ 8 ಆಣೆ.

ತರೀಕೆರೆಯಲ್ಲಿ—ಭತ್ತ ಮತ್ತು ರಾಗಿ, ಉತ್ಪತ್ತಿ 8 ಆಣೆ; ಜೋಳ, ಉತ್ಪತ್ತಿ 16 ಆಣೆ.

ಕೊಪ್ಪದಲ್ಲಿ—ಅಡಿಕೆ ಉತ್ಪತ್ತಿ 8 ಆಣೆ.

ಮೂಡಿಗೆರೆಯಲ್ಲಿ ರಾಗಿ, ಉತ್ಪತ್ತಿ 4 ಆಣೆ; ಯಾಲಕ್ಕಿ, ಉತ್ಪತ್ತಿ 8 ಆಣೆ.

ಎಡೇಹಳ್ಳಿಯಲ್ಲಿ—ಭತ್ತ ಮತ್ತು ಅಡಿಕೆ, ಉತ್ಪತ್ತಿ 12 ಆಣೆ.

ಶೃಂಗೇರಿಯಲ್ಲಿ—ಅಡಿಕೆ ಮತ್ತು ಭತ್ತ, ಉತ್ಪತ್ತಿ ಸ್ವಲ್ಪ.

10. ಕಾಲದ ಆಯತಿಯು ಚೆನ್ನಾಗಿದೆ. ಆದರೆ, ಕೊಪ್ಪ, ಕಡೂರು, ಈ ತಾಲ್ಲೂಕುಗಳಲ್ಲಿ ಮಳೆಯು ಬೇಕಾಗಿದೆಯೆಂದು ರಿಪೋರ್ಟಾಗಿದೆ. ಆಹಾರ ಜೀನಸು ಸಾಕು.

11. ಬೀರೂರು, ಸಕ್ರೆಪಟ್ಟಣ, ಕಡೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ಚಿಕ್ಕಮಗಳೂರು, ಮೂಡಿಗೆರೆ ಈ ತಾಲ್ಲೂಕುಗಳಲ್ಲಿ "ದೊಡ್ಡ ರೋಗವು" ಇನ್ನೂ ಇರುತ್ತಲಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9 ನಿಂತಿರುವ ಪೈರುಗಳ ಸ್ಥಿತಿ—ಕಳೆದ ವಾರದಲ್ಲಿ ಆದ ಮಳೆಯು, ಸ್ವಲ್ಪವಾದ್ದಾದರೂ, ಚಿಳ್ಳಕೆರೆ, ಹಿರಿಯೂರು ಈ ತಾಲ್ಲೂಕುಗಳು ವಿನಹಾ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಅರಳೆ, ಬಿಳೀ ಜೋಳ, ಹುರುಳಿ, ಮುಂತಾದ ನಿಂತಿರುವ ಪೈರುಗಳಿಗೆ ಸ್ವಲ್ಪ ಒಳ್ಳೇದು ಮಾಡಿದೆ. ಚಿಳ್ಳಕೆರೆ, ಹಿರಿಯೂರು ಈ ತಾಲ್ಲೂಕುಗಳಲ್ಲಿ ಪೈರುಗಳು ಬಾಡಿ ಹೋಗುತ್ತಿವೆ.

ಬಿತ್ತನೆಯಾದ ಪೈರುಗಳು—ಏನೂ ಇಲ್ಲ.

ಕುಯ್ಯಲಾದ ಪೈರುಗಳ ಮತ್ತು ಅವುಗಳ ಉತ್ಪತ್ತಿ:—

ಎಲ್ಲಾ ತಾಲ್ಲೂಕುಗಳಲ್ಲಿಯೂ ರಾಗಿ—ಉತ್ಪತ್ತಿ 4 ರಿಂದ 12 ಆಣೆ ವರಿಗೆ. ಚಳ್ಳಕಾಲ್ಮುರು, ಜಗಲೂರು ಈ ತಾಲ್ಲೂ ಕುಗಳಲ್ಲಿ ಜೋಳ—ಉತ್ಪತ್ತಿ 4 ರಿಂದ 12 ಆಣೆ ವರಿಗೆ. ಚಿತ್ರದುರ್ಗ, ಹೊಳಲ್ಕೆರೆ, ಜಗಲೂರು, ಹೊಸದು ರ್ಗ ಈ ತಾಲ್ಲೂಕುಗಳಲ್ಲಿ ಸವಣೆ—ಉತ್ಪತ್ತಿ 4 ರಿಂದ 12 ಆಣೆ ವರಿಗೆ. ಹೊಳಲ್ಕೆರೆ ತಾಲ್ಲೂಕಿನಲ್ಲಿ ಭತ್ತ ಮ ತ್ತು ಅರಳೆ ಉತ್ಪತ್ತಿ 8 ಆಣೆ. ಹಿರಿಯೂರು, ಚಳ್ಳಕಾಲ್ಮುರು, ಜಗಲೂರು ಈ ತಾಲ್ಲೂಕುಗಳಲ್ಲಿ ಸಜ್ಜೆ— ಉತ್ಪತ್ತಿ 4ರಿಂದ 12 ಆಣೆ ವರಿಗೆ

10. ಕಾಲದ ಆಯತಿಯು ಸುಮಾರಾಗಿದೆ. ಆದರೆ, ಚಳ್ಳಕೆರೆ, ಹಿರಿಯೂರು ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕುಷ್ಕೀ ಪೈರುಗಳ ಉತ್ಪತ್ತಿಯು 4 ಆಣೆಗಿಂತಲೂ ಕಮ್ಮಿಯಾಗಿ ಇದೆ. ಆಹಾರ ಜೀನಸು ಸಿಕ್ಕುತ್ತವೆ.

11. ದಾವಣಗೆರೆ, ಚಳ್ಳಕಾಲ್ಮುರು, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ಡಿಸೆಂಬರ್ 10ನೆಯ ತಾರೀಖು. } ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ್.